

FLN Series

# ಕನ್ನಡ ಅಭ್ಯಾಸ ಪುಸ್ತಕ -1


6 ಮತ್ತು 7 ನೇ ತರಗತಿ

## —: ಪುಸ್ತಕದ ಕುರಿತಾಗಿ :—

- ಈ ಪುಸ್ತಕವು ಮಕ್ಕಳಿಗೆ ಕನ್ನಡ ಭಾಷೆಯನ್ನು ವರ್ಣಮಾಲೆಯಿಂದ ಪರಿಚಯಿಸುತ್ತದೆ.
- ಪ್ರತಿನಿತ್ಯ ಓದಲು, ಬರೆಯಲು ಹಂತಹಂತವಾಗಿ ಅಭ್ಯಾಸಗಳನ್ನು ನೀಡಲಾಗಿದೆ.
- ಈ ಪುಸ್ತಕದ ಅಭ್ಯಾಸದ ಕೊನೆಯಲ್ಲಿ ಮಕ್ಕಳು ಈ ಕಲಿಕಾಂಶಗಳನ್ನು ಸಾಧಿಸಬಹುದು.
  1. ಓದುವುದು: ವರ್ಣಮಾಲೆ, ಸರಳ ಪದಗಳು, ಸರಳ ವಾಕ್ಯಗಳು, ಕಾಗುಣಿತ.
  2. ಬರೆಯುವುದು: ಅಕ್ಷರಗಳು, ಗುಣಿತಾಕ್ಷರಗಳು, ಸರಳ ಪದಗಳು, ಸರಳ ವಾಕ್ಯಗಳು.
- ಈ ಪುಸ್ತಕವು ಆರಂಭಿಕ ಹಂತದಿಂದ ಕನ್ನಡ ಭಾಷೆಯಲ್ಲಿ ಓದುವುದನ್ನು, ಬರೆಯುವುದನ್ನು ಕಲಿಯಲು ಸೂಕ್ತವಾಗಿದೆ.
- ವಾರಕ್ಕೆ 3 - 4 ಪುಟದಷ್ಟು ಅಭ್ಯಾಸ ಮಾಡಿದರೆ, 3 - 4 ತಿಂಗಳುಗಳಲ್ಲಿ ಈ ಅಭ್ಯಾಸ ಪುಸ್ತಕವನ್ನು ಸಂಪೂರ್ಣಗೊಳಿಸಬಹುದು.

## —: ಸೂಚನೆಗಳು :—

1. ಪ್ರತಿನಿತ್ಯ ಒಂದು ಪುಟದಷ್ಟಾದರೂ ಅಭ್ಯಾಸ ಮಾಡಬೇಕು
2. ಓದುವಾಗ ಪೋಷಕರು/ ಶಿಕ್ಷಕರು/ಸಹಪಾಠಿಗಳ ಮುಂದೆ ಜೋರಾಗಿ ಓದಿ, ಉಚ್ಚಾರಣೆ ಸರಿಯಾಗಿದೆಯೇ ಎಂದು ತಿಳಿಯಬೇಕು. ಇಲ್ಲದಿದ್ದಲ್ಲಿ ಸರಿಪಡಿಸಿಕೊಳ್ಳಬೇಕು.
3. ನಂತರ ಬರೆಯಬೇಕು. ಬರೆಯುವಾಗ ಜೋರಾಗಿ ಓದುತ್ತಾ ಬರೆದರೆ ಒಳ್ಳೆಯದು.
4. ಯಾವುದೇ ಭಾಗದಲ್ಲಿ ಸಹಾಯ ಬೇಕಿದ್ದಲ್ಲಿ, ಕೇಳಿ ಪಡೆಯಬೇಕು.
5. ವಾರಕೊಮ್ಮೆ ಶಿಕ್ಷಕರಿಗೆ ತೋರಿಸಿ ಸಹಿ ಪಡೆಯಬೇಕು.
6. ಈ ಚಿಹ್ನೆಗಳನ್ನು ಹೀಗೆ ತಿಳಿಯಿರಿ:

| | |
|---|---|
| ಓದುವದು |  |
| ಬರೆಯಿರಿ |  |

7. ಯಾವುದೇ ಪರಿಕಲ್ಪನೆಯ ಮೇಲೆ ಹೆಚ್ಚಿನ ಅಭ್ಯಾಸಕ್ಕಾಗಿ ಮತ್ತು ಪುಸ್ತಕದ ಡಿಜಿಟಲ್ ಪ್ರತಿಗಾಗಿ ಈ ಲಿಂಕ್ ಅಥವಾ QR code ಬಳಸಬಹುದು:
   http://sikshana.org/fln.html
8. QR code ಗಳನ್ನು smart phone ಮೂಲಕ scan ಮಾಡಲು google lens ಅಥವಾ ಇನ್ನಿತರೇ ಸೂಕ್ತ app download ಮಾಡಿ ಬಳಸಬೇಕು.

" We have put our efforts to make this book free of content errors and typos. However, if you happen to find any or have suggestions for improvement, please reach out to us at **feedback@sikshana.org** "

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1 | ವರ್ಣ ಮಾಲೆ | 1 |
| 2 | ಗುಣಿತಾಕ್ಷರಗಳಿರುವ ಪದಗಳು | |
| | ಕ ಖ ಗ ಘ | 2 - 6 |
| | ಚ ಛ ಜ ಝ | 7 - 10 |
| | ಟ ಠ ಡ ಢ ಣ | 11 - 14 |
| | ತ ಥ ದ ಧ ನ | 15 - 21 |
| | ಪ ಫ ಬ ಭ ಮ | 22 - 27 |
| | ಯ ಇಂದ ಳ ವರೆಗೆ | 28 - 38 |
| 3 | ಒತ್ತಕ್ಷರಗಳು | 39 - 42 |
| 4 | ಓದುವ ಅಭ್ಯಾಸ | 43 - 48 |

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಎರಡು ಬಾರಿ ಬರೆಯಿರಿ:

## ವರ್ಣಮಾಲೆ:

ಅ ಆ ಇ ಈ ಉ ಊ ಋ ಎ ಏ ಐ

ಒ ಓ ಔ ಅಂ ಅಃ

ಕ ಖ ಗ ಘ ಙ | ಚ ಛ ಜ ಝ ಞ

ಟ ಠ ಡ ಢ ಣ | ತ ಥ ದ ಧ ನ

ಪ ಫ ಬ ಭ ಮ |

ಯ ರ ಲ ವ ಶ | ಷ ಸ ಹ ಳ

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

## ಗುಣಿತಾಕ್ಷರಗಳಿರುವ ಪದಗಳು [ ಕ ]

ಕ – ಕರ, ಕಡಗ, ಕರಗ, ಕದ, ಕಮಲ, ಕದನ, ಕಲಹ, ಕವಚ, ಕವನ

ಕಾ – ಕಾಲ, ಕಾಟ, ಕಾಗದ, ಕಾರಣ, ಕಾನನ

ಕಿ – ಕಿಲಕಿಲ, ಕಿಟಕಿ     ಕೀ – ಕೀಟ, ಕೀಚಕ, ಕೀಲು

ಕು – ಕುರಿ, ಕುವರ, ಕುಸುಮ, ಕುರುಬ, ಕುರುಡ, ಕುಮುದ

ಕೂ – ಕೂಪ, ಕೂಗು, ಕೂಟ, ಕೂಟು, ಕೂಗಾಟ, ಕೂರಿಸು

ಕೃ – ಕೃಪ, ಕೃತಕ, ಕೃತ

ಕೆ – ಕೆರೆ, ಕೆನೆ, ಕೆಲಸ, ಕೆಸರು, ಕೆದಕು, ಕೆಡಕು

ಕೇ – ಕೇಳು, ಕೇರು, ಕೇಡು, ಕೇದಿಗೆ, ಕೇವಲ

ಕೈ – ಕೈ, ಕೈಗಡ, ಕೈಗಾರಿಕೆ

ಕೊ – ಕೊಡ, ಕೊಡವ, ಕೊಸರು, ಕೊಡಗು

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಕೋ– ಕೋಪ, ಕೋಡಗ, ಕೋಲಾಟ

ಕೌ – ಕೌರವ, ಕೌತುಕ

ಕಂ – ಕಂಠ, ಕಂದ, ಕಂದಕ, ಕಂಠೀರವ    ಕಃ –

ಗುಣಿತಾಕ್ಷರಗಳಿರುವ ಪದಗಳು [ ಖ ]

ಖ – ಖರ, ಖಜಾನೆ, ಖಚಿತ, ಖಳನಾಯಕ

ಖಾ – ಖಾರ, ಖಾನಾವಳಿ

ಖಿ – ಅಖಿಲ    ಖೀ – ಖೀರು    ಖು – ಖುಷಿ

ಖೂ– ಖೂನಿ    ಖೃ –    ಖೆ –

ಖೇ – ಖೇಚರ    ಖೈ – ಖೈದಿ    ಖೊ– ಖೊ,ಖೊ

ಖೋ– ಖೋವಾ    ಖೌ –    ಖಂ – ಖಂಡಿತ, ಖಂಡನೆ    ಖಃ –

ದಿನಾಂಕ : ____ / ____ / ____

ಚಟುವಟಿಕೆ 1:

ಈ ಕೆಳಗಿನ ಅಕ್ಷರಗಳಿಂದ ಅರ್ಥಪೂರ್ಣ ಪದಗಳನ್ನು ರಚಿಸಿ.

ಉದಾ: ಹ, ಗ, ರ, ಣ

ಹಣ, ಗರ, ಹರಣ, ಗರ, ಹರಣ, ಹರ, ರಣ, ಹಗರಣ

1. ವ, ನ, ದ :

2. ರ, ಗ, ಸ :

3. ಕ, ದ, ನ :

ಚಟುವಟಿಕೆ 2: ಇವುಗಳನ್ನು ಕೂಡಿಸಿ ಓದಿ.

ಕ → ವಿ ← ಕಿ

ಕೃ → ಪ ← ಕೂ

ಕೂ → ಟ ← ಕಾ

ಕಾ → ಲ ← ಕೇವ

ಚಟುವಟಿಕೆ 3:

ಕೈ – ಸೇರಿಸಿ : ____ ಗಡ ____ ವಲ್ಯ ____ ಸಾಲ ____ ಗಾರಿಕೆ

ಕೋ – ಸೇರಿಸಿ: ____ ಪ ____ ಡಗ ____ ಊಟ ____ ಮಲ

ಕೌ – ಸೇರಿಸಿ: ____ ರವ ____ ತುಕ ____ ಸ್ತುಭ

ಕಂ – ಸೇರಿಸಿ : ____ ದ ____ ಠ ____ ದಕ ____ ಸಾಳೆ

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗುಣಿತಾಕ್ಷರಗಳಿರುವ ಪದಗಳು [ ಗ ]

ಗ – ಗರ, ಗರಡಿ, ಗರಗಸ ಗಮನ

_______________________________________________

_______________________________________________

ಗಾ – ಗಾಣ, ಗಾಲಿ, ಗಾನ, ಗಾಳಿ, ಗಾರುಡಿ

_______________________________________________

_______________________________________________

ಗಿ – ಗಿಡ, ಗಿಳಿ, ಗಿಡಗ

_______________________________________________

_______________________________________________

ಗೀ – ಗೀತಾ, ಗೀರು, ಗೀಜಗ

_______________________________________________

_______________________________________________

ಗು – ಗುರು, ಗುಂಪು, ಗುಣ, ಗುಣಾಕಾರ

_______________________________________________

_______________________________________________

ಗೂ – ಗೂಬೆ, ಗೂಡು        ಗೃ – ಗೃಹ

_______________________________________________

_______________________________________________

ಗೆ – ಗೆಣಸು, ಗೆಳೆಯ, ಗೆಳತಿ

_______________________________________________

_______________________________________________

ಗೇ – ಗೇರುಬೀಜ, ಗೇಣು, ಗೇಲಿ

_______________________________________________

_______________________________________________

ಗೈ – ಗೈರುಹಾಜರಿ        ಗೊ – ಗೊಣಗು, ಗೊರಕೆ

_______________________________________________

_______________________________________________

ಗೋ – ಗೋರಿ, ಗೋಡೆ        ಗೌ – ಗೌರಿ, ಗೌಡ, ಗೌಳಿಗ

_______________________________________________

_______________________________________________

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗಂ – ಗಂಟು, ಗಂಡ, ಗಂಧ, ಗಂಗಾ     ಗಃ –

ಗುಣಿತಾಕ್ಷರಗಳಿರುವ ಪದಗಳು [ ಘ ]
ಘ – ಘನ, ಘಟಕ, ಘರ್ಷಣೆ, ಘಟ, ಘಟನೆ

ಘಾ – ಘಾತುಕ, ಘಾತ     ಘಿ – ಡೆಂಘಿ

ಘೀ – ಘೀಳೀಡು     ಘು – ಘುಂಗುಡು

ಘೂ – ಮದಘೂರ್ಣಿತ     ಘೃ – ಘೃತ     ಘೆ –


ಘೇ – ಘೇಂಡಾ     ಘೈ –     ಘೊ –

ಘೋ – ಘೋಷಣೆ     ಘೌ –     ಘಂ – ಘಂಟೆ     ಘಃ –

ಗುಣಿತಾಕ್ಷರಗಳಿರುವ ಪದಗಳು [ ಚ ]
ಚ – ಚಮಚ, ಚಹಾ, ಚಲನೆ, ಚರಕ

ಚಾ – ಚಾಟಿ, ಚಾಪೆ, ಚಾಮರ, ಚಾಲನೆ, ಚಾಳೀಸು

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಚಿ – ಚಿಟಕೆ, ಚಿಲಕ, ಚಿರತೆ, ಚಿವುಟು

ಚೀ – ಚೀಲ, ಚೀಕು, ಚೀನಾ, ಚೀರಾಟ

ಚು – ಚುಟಕ, ಚುಕುಬುಕು, ಚುಬುಕ

ಚೂ – ಚೂರು, ಚೂಪು, ಚೂತ, ಚೂರಣ

ಚೃ –  ಚೆ – ಚೆಂದ, ಚೆದುರೆ, ಚೆಲುವು

ಚೇ – ಚೇಳು, ಚೇರು, ಚೇತರಿಕೆ  ಚೈ –  ಚೊ – ಚೊಂಬು

ಚೋ – ಚೋರ, ಚೋಟು

ಚೌ – ಚೌಕ, ಚೌಲ, ಚೌಡಿ, ಚೌಕಭಾರ

ಚಂ – ಚಂಚಲ, ಚಂದನ, ಚಂಚಂ  ಚಃ –

ಗುಣಿತಾಕ್ಷರಗಳಿರುವ ಪದಗಳು [ ಛ ]

ಛ – ಛಲ  ಛಾ – ಛಾಯೆ  ಛಿ –

ದಿನಾಂಕ : ____ / ____ / ____

ಚಟುವಟಿಕೆ 1: ಇವುಗಳನ್ನು ಓದಿ.

ಕಾ, ಕೂ, ಕೇ, ಗೀ, ಗೇ, ಗು, ಗೈ, ಖೀ, ಕೋ → ರು

ಕ, ಕು, ಕೇ, ಗು, ಗ, ಗೋ, ಗೌ → ರಿ

ಕ, ಖ, ಖಾ, ಗ, ಗೌ → ರ

ಚಟುವಟಿಕೆ 2: ದಪ್ಪ ಇರುವ ಅಕ್ಷರದ ದೀರ್ಘಾಕ್ಷರ ಬರೆಯಿರಿ.

ಉದಾ: **ಚ**ಲನೆ → **ಚಾ**ಲನೆ

**ಖ**ರ → _____ ರ　　**ವ**ರ → _____ ರ　　**ಹ**ರ → _____ ರ

**ಲ**ತ → _____ ತ　　**ಮ**ರ → _____ ರ　　**ಪ**ದ → _____ ರ

**ಮ**ನ → _____ ನ　　**ರ**ಜ→ _____ ಜ

ಚಟುವಟಿಕೆ 3: ಸರಿಯಾದ ಅಕ್ಷರಗಳನ್ನು ಬಳಸಿ, ಬಿಟ್ಟ ಸ್ಥಳ ತುಂಬಿರಿ.

ಘ　ಘಾ　ಘೇಂ　ಘಂ　ಚ　ಚಿ　ಚೀ　ಚೆ　ಚೌ

_____ ಮಚ　_____ ನ　_____ ಲಕ　_____ ಲ

_____ ಟ　_____ ಲುವು　_____ ತ　_____ ಡಾ

_____ ಕ　_____ ಟೆ　_____ ಗುರು　_____ ಮ _____ ಮ

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಭೀ – ಭೀ ಭೀ, ಭೀಮಾರಿ

ಭು – ಭುಕುಬುಕು ಭೂ – ಭೂ ಮಂತರ್ ಭೃ – ಭೆ –

ಭೇ – ಭೇ ಭೇ, ಭೇಡಿಸು ಭೈ – ಭೊ – ಭೋ –

ಭೌ – ಭಂ – ಭಂಗನೆ ಭಃ –

ಗುಣಿತಾಕ್ಷರಗಳಿರುವ ಪದಗಳು [ ಜ ]

ಜ – ಜಲ, ಜಲಜ, ಜನಕ, ಜಲಚರ, ಜಲಜನಕ

ಜಾ – ಜಾಣ, ಜಾಗ, ಜಾರು, ಜಾರಿಕೆ, ಜಾಲಿಮರ

ಜಿ – ಜಿಗಿತ, ಜಿಗುಟು, ಜಿಗಣೆ, ಜಿರಲೆ, ಜಿಗಿದಾಟ

ಜೀ – ಜೀಪು, ಜೀವನ, ಜೀರಿಗೆ, ಜೀವನದಿ, ಜೀವಭಯ

ಜು – ಜುಲುಮೆ, ಜುಳುಜುಳು ಜೂ – ಜೂಜು, ಜೂಜಾಟ

ಜೃ – ಜೆ – ಅನುಜೆ ಜೇ – ಜೇಡ, ಜೇನು

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಜೈ – ಜೈಲು, ಜೈಕಾರ ಜೊ – ಜೊಂಡು

ಜೋ – ಜೋಲಿ, ಜೋಳ, ಜೋಗಿ, ಜೋಗುಳ, ಜೋತುಬೀಳು, ಜೋಪಾನ

ಜೌ – ಜೌಗುನೆಲ ಜಂ – ಜಂಭ, ಜಂಜಾಟ, ಜಂಜಡ ಜಃ –

ಗುಣಿತಾಕ್ಷರಗಳಿರುವ ಪದಗಳು [ ಝ ]

ಝ – ಝಣ, ಝರಿ ಝಾ – ಝಾಡಿಸು ಝಿ –

ಝು – ಝುಣುಕ ಝೂ – ಝೃ – ಝೆ –

ಝೇ – ಝೇಂಕಾರ, ಝೇಂಕೃತಿ ಝೈ – ಝೊ –

ಝೋ – ಝೌ – ಝಂ – ಝಃ –

ಗುಣಿತಾಕ್ಷರಗಳಿರುವ ಪದಗಳು [ ಟ ]

ಟ – ಟಗರು, ಟಪಾಲು, ಟಪಟಪ

ಟಾ – ಟಾರು, ಟಾಂಗ, ಟಾಟ, ಟಾಕ

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಟಿ – ಟಿಸಿಲು, ಟಿಕೆಟ್, ಚಿಟಿಕೆ ಟೀ – ಟೀಕೆ, ಟೀಪಾಯಿ

ಟು – ಗುಟುರು, ಗುಟುಕು ಟೂ –

ಟೃ – ಟೆ – ಗಂಟೆ, ಹರಟೆ ಟೇ – ಟೇಪು, ಟೇಬಲ್

ಟೈ – ಟೈರು ಟೊ – ಟೊಮೆಟೊ, ಟೊಂಗೆ

ಟೋ – ಟೋಪಿ, ಆಟೋಟ, ಟೋಕಿಯೋ

ಟೌ – ಟೌನ್‌ಷಿಪ್ ಟಂ – ಟಂಟಂ ಟಃ –

ಗುಣಿತಾಕ್ಷರಗಳಿರುವ ಪದಗಳು [ ಠ ]

ಠ – ಠರಾವು, ಮಠ, ಕಂಠ, ಠಕ್ಕ ಠಾ – ಠಾಣೆ

ಠಿ – ಠಿಕಾಣಿ ಠೀ – ಠೀಕು ಠು – ಠುಮರಿ

ಠೂ – ಠೃ – ಠೆ – ಠೇ – ಠೇಂಕಾರ ಠೈ –

ಠೊ – ಠೊಣಪ ಠೋ – ಠೌ – ಠಂ – ಠಃ –

ದಿನಾಂಕ : ____ / ____ / ____

ಚಟುವಟಿಕೆ 1:

ಈ ಕೆಳಗಿನ ಪದಗಳನ್ನು ಬಳಸಿ ವಾಕ್ಯಗಳು ಅರ್ಥಪೂರ್ಣವಾಗುವಂತೆ ಬಿಟ್ಟ ಸ್ಥಳ ತುಂಬಿರಿ.

| | | | | |
|---|---|---|---|---|
| ಜಂಭ | ಜೋಪಾನ | ಜೈಲು | ಜೋಗುಳ | ಜೂಲುನಾಯಿ |
| ಜೇಡ | ಜೌಗುನೆಲ | ಜೇನು | ಜೊಂಡು | ಜಳಕ |
| ಜೇಪು | ಜಾಣ | ಜೀವಭಯ | ಜಲಚರ | ಜಾರಿ |
| ಜೀವನದಿ | | | | |

1. ______________ ದ ಕೋಳಿ.
2. ______________ ದಲ್ಲಿ ಬಿದ್ದ.
3. ____________ ಹಾಡಿ ಮಲಗಿಸಿದಳು.
4. ಹಣವನ್ನು ____________ ಮಾಡಿದನು.
5. ಕೈದಿಯನ್ನು ____________ ಗೆ ಹಾಕಿದರು.
6. ಕೆರೆಯಲ್ಲಿ ____________ ಬೆಳೆದಿತ್ತು.
7. ______________ ರ ಬಲೆ.
8. ಕರಡಿಗೆ ______________ ಇಷ್ಟ.
9. ನಮ್ಮ ನಾಯಿ ______________.
10. ನದಿಯಲ್ಲಿ ನಾವು ______________ ಮಾಡಿದೆವು.
11. ನಾವು ______________ ನಲ್ಲಿ ಪ್ರಯಾಣ ಮಾಡಿದೆವು.
12. ಬಚ್ಚಲಲ್ಲಿ ______________ ಬಿದ್ದೆ.
13. ಬೆಟ್ಟ ಏರುವಾಗ ______________ ಆಯಿತು.
14. ಕಾವೇರಿ ನಮ್ಮ ನಾಡಿನ ______________ .
15. ಗುರುಗಳು ನನ್ನನ್ನು ______________ ಎಂದರು.
16. ಮೀನು ಒಂದು ______________.

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗುಣಿತಾಕ್ಷರಗಳಿರುವ ಪದಗಳು [ ಡ ]

ಡ – ಗಿಡ, ಉಡ, ಗಡ ಗಡ, ಡಮರುಗ

ಡಾ – ಡಾಂಬರು, ಬಡಾಯಿ, ಕಡಾಯಿ

ಡಿ – ಉಡಿ, ಬಂಡಿ, ಛಡಿ, ಉಂಡಾಡಿ ಡೀ –

ಡು – ಡುಮುಕಿ, ಕೊಡು, ಬಿಡು, ಕೊಂಡಾಡು, ಕೋಡು, ನೋಡು, ಬೀಡು

ಡೂ – ಡೃ – ಡೆ – ಉಂಡೆ, ಗೋಡೆ, ಗೊಂಡೆ, ಬಂಡೆ, ಕಂಡೆ

ಡೇ – ಡೇರೆ ಡೈ – ಡೈರಿ ಡೊ – ಡೊಂಕು

ಡೋ– ಡೋಲಿ ಡೌ – ಡೌಲು ಡಂ – ಡಂಕಣ ಡಃ –

ಗುಣಿತಾಕ್ಷರಗಳಿರುವ ಪದಗಳು [ ಢ ]

ಢ – ಢಂಗುರ, ಢಕ್ಕೆ, ಢಮರುಗ

ಢಾ – ಢಾಳಾಗಿ ಢಿ – ಢಿಕ್ಕಿ (ಡಿಕ್ಕಿ)

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಢೀ – ಢು – ಢೂ – ಢೃ – ಢೆ – ಢೇ –

ಢೈ – ಢೊ – ಢೋ – ಢೌ – ಢಂ – ಢಃ –

ಗುಣಿತಾಕ್ಷರಗಳಿರುವ ಪದಗಳು [ ಣ ]

ಣ – ಕಣ, ನೊಣ, ಹಣ, ಬಣ, ಅಂಕಣ, ಮಣ

ಣಾ – ಹಣಾಹಣಿ, ಗುಣಾಕಾರ, ಪ್ರಣಾಮ

ಣಿ – ಗಣಿತ, ಹರಿಣಿ, ಹಣಿಗೆ, ಮಣಿ, ಗುಣಿಸು, ಕುಣಿ, ಏಣಿ

ಣೀ – ಗೋಣೀಚೀಲ, ಫಣೀಶ ಣು – ಗೋಣು, ನೇಣು, ಮಾಣು, ಕಾಣು

ಣೂ – ಚಾಣೂರ ಣೃ –

ಣೆ – ಹಣೆ, ಹೆಣೆ, ಬೆಣೆ, ಕವಣೆ, ಮಣೆ, ಕರುಣೆ, ಎಣೆ, ಸಾಣೆ, ಪಾರಣೆ

ಣೇ – ಗಣೇಶ, ಪ್ರಾಣೇಶ ಣೈ – ಗಣೈಕ, ಗುಣೈಕ

ಣೊ – ಣೋ – ಣೌ – ಣಂ – ಣಃ –

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

## ಗುಣಿತಾಕ್ಷರಗಳಿರುವ ಪದಗಳು [ ತ ]

ತ – ತಲೆ, ತರಲೆ, ತಬಲ, ತವಕ, ತವರು, ತರಕಾರಿ, ತನು, ತನುಜ, ತರಿ, ತಪ್ಪು

ತಾ – ತಾತ, ತಾಯಿ, ತಾನು, ತಾಯತ, ತಾರೆ, ತಾವರೆ

ತಿ – ತಿಲ, ತಿಳಿ, ತಿಲಕ, ತಿಮಿರ, ತಿರುಕ,

ತೀ – ತೀರ, ಅತೀವ, ಅತೀತ, ಮತೀಯ

ತು – ತುಂತುರು, ತುರಗ, ತುಪಾಕಿ, ಆತುರ, ಕಾತುರ, ತುರಿಕೆ, ತುತ್ತೂರಿ

ತೂ – ತೂತು, ತೂಕ, ತೂಕಡಿಕೆ, ತೂಗಾಲಿ

ತೃ – ತೃಣ ತೆ – ತೆಂಗು, ತೆನೆ, ತೆಂಕಣ, ತೆನಾಲಿ


ತೇ – ತೇರು, ತೇಗ, ತೇವ ತೈ – ತೈಲ, ತೈಲಪ

ತೊ – ತೊಡಗು, ತೊನೆದಾಡು, ತೊಲಗು, ತೊಡೆ


ತೋ – ತೋಪು, ತೋಳ, ತೋರಣ, ತೋರಿಕೆ, ತೋರಿಸು


ದಿನಾಂಕ : ____ / ____ / ____

ಚಟುವಟಿಕೆ 1: ಚಿತ್ರ ಮತ್ತು ಪದಗಳನ್ನು ಹೊಂದಿಸಿ ಬರೆಯಿರಿ.

ಝುರಿ   ಟಗರು


ಟಪಾಲು   ಟೀಪಾಯಿ

ಗುಟುಕು   ಟೈರು



ಟಾಂಗಾ   ಟೊಂಗೆ

ಟಿಕೆಟ್   ಟೋಪಿ

ಗಂಟೆ   ಠಾಣೆ

ಚಟುವಟಿಕೆ 2: ಸರಿಯಾದ ಪದಕ್ಕೆ ವೃತ್ತ ಹಾಕಿ.

ಜರಿ – ಝುರಿ ಮಠ – ಮಟ ಕಂಟ – ಕಂಠ

ಠಿಕಾಣಿ – ಟಿಕಾಣಿ ಟೊಂಗೆ – ತೊಂಗೆ ಗುಠುಕು – ಗುಟುಕು

| | | | |
|---|---|---|---|
| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | 🙂 😐 🙁 | ಪೋಷಕರ / ಶಿಕ್ಷಕರ ಸಹಿ : | |

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ತೌ – ತೌಡು, ತೌರು

ತಂ – ತಂಗಿ, ತಂಪು, ತಂದೆ, ತಂಗಾಳಿ, ತಂಗು, ತಂತಿ ತಃ –

ಗುಣಿತಾಕ್ಷರಗಳಿರುವ ಪದಗಳು [ ಥ ]

ಥ – ಥಳಥಳ, ಥಳಿಸು, ಥಳಕು, ಥಕಥಕ

ಥಾ – ಥಾನು, ಕಥಾಸಾಗರ ಥಿ – ತಿಥಿ, ಅತಿಥಿ

ಥೀ – ಥು – ಥೂ – ಥೃ – ಥೆ – ಥೇ –

ಥೈ – ಥೈಲಿ, ಥೈಥೈ ಥೊ – ಥೋ – ಥೌ –

ಥಂ – ಥಂಡಿ ಥಃ –

ಗುಣಿತಾಕ್ಷರಗಳಿರುವ ಪದಗಳು [ ದ ]

ದ – ದನ, ದಯೆ, ದವನ, ದಮನ, ದಲಿತ

ದಾ – ದಾನ, ದಾರಿ, ದಾರುಣ, ದಾವಣಿ

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ದಿ – ದಿನ, ದಿವಾಳಿ, ದಿವಾನ, ದಿನಕರ

ದೀ – ದೀಪ, ದೀನ, ದೀನಾರ, ದೀನದಲಿತ, ದೀವಾನ

ದು – ದುಡಿ, ದುಗುಡ, ದುರಿತ, ದುಮ್ಮಾನ, ದುಂದುಭಿ, ದುಃಖ

ದೂ – ದೂರ, ದೂಕು, ದೂತ, ದೂಷಣೆ

ದೃ – ದೃಢ        ದೆ – ದೆಶೆ, ದೆಸೆ, ಎದೆ, ಒದೆ, ಸದೆ

ದೇ – ದೇಶ, ದೇಹ, ದೇಣಿಗೆ, ದೇವರು, ದೇಗುಲ, ದೇವಾಲಯ

ದೈ – ದೈವ        ದೊ – ದೊರಕು, ದೊರಗು, ದೊರೆ

ದೋ – ದೋಸೆ, ದೋಣಿ, ದೋಚು        ದೌ – ದೌಡಾಯಿಸು

ದಂ – ದಂಡ, ದಂತ, ದಂಗೆ, ದಂಡು, ಕದಂಬ        ದಃ –

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

## ಗುಣಿತಾಕ್ಷರಗಳಿರುವ ಪದಗಳು [ ಧ ]

ಧ – ಧಗೆ, ಧಮನಿ, ಧರೆ, ಧನ

ಧಾ – ಧಾರೆ, ಧಾರಿಣಿ, ಧಾರಾಕಾರ

ಧಿ – ಧಿಮಾಕು, ಅಧಿಕ ಧೀ – ಅಧೀನ, ಔಷಧೀ

ಧು – ಧುಮುಧುಮು, ಬಂಧು, ಸಿಂಧು, ಧುರೀಣ, ಮಧು

ಧೂ – ಧೂಳು, ಧೂಪ, ಧೂಮ, ವಧೂ, ಗೋಧೂಳಿ, ಧೂಮಕೇತು

ಧೃ – ಧೃವ, ಧೃತಿ ಧೆ – ವಸುಧೆ, ವಧೆ, ಸುಧೆ, ರಾಧೆ

ಧೇ – ಧೇನು ಧೈ – ಧೈರ್ಯ ಧೊ –

ಧೋ – ಧೋರಣೆ, ಅಧೋಗತಿ, ಮುಧೋಳ

ಧೌ – ಧಂ – ಧಃ –

ದಿನಾಂಕ : ____ / ____ / ____

ಚಟುವಟಿಕೆ 1:
ಇವುಗಳಲ್ಲಿ ಕ್ರಿಯೆಯನ್ನು ತೋರಿಸುವ ಪದವನ್ನು ವೃತ್ತ ಹಾಕಿ ಗುರುತಿಸಿ.

| | | | | |
|---|---|---|---|---|
| ತೆಂಗು | ಥಾನು | ತೋಪು | ಥಳಿಸು | ತೊಡಗು |
| ಅತಿಥಿ | ತಂಗು | ಥಳಕು | ತೊಡೆ | ತೇರು |
| ತೊನೆದಾಡು | ತೊಲಗು | ತೋರು | ತೈಲ | ತಿಲಕ |
| ತೂಕಮಾಡು | ತೂಕಡಿಸು | ತುತ್ತೂರಿ | ತೂಗು | ತಿರುಪೆ ಬೇಡು |
| ತಿಳಿದುಕೋ | ತಾ | ತೂರಿಸು | ತಾತ | ತಾವರೆ |
| ತುರಿಸು | ತಲೆ | ಆತುರಪಡಿಸು | | ತೇವ |

ಚಟುವಟಿಕೆ 2: ಇವುಗಳನ್ನು ಓದಿ.

ತು, ತೋ, ತ, ತೀ → ರಿಸು

ತಾ → ಯಿ, ತ, ನು, ರೆ, ವರೆ

ತಿ → ಳಿ, ಲಕ, ರುಕ, ಮಿರ

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

## ಗುಣಿತಾಕ್ಷರಗಳಿರುವ ಪದಗಳು [ ನ ]

ನ – ನಗರ, ನಯನ, ನರಕ, ನವಿಲು, ನಮನ

______________________________________________________________

______________________________________________________________

ನಾ – ನಾಳೆ, ನಾನು, ನಾಗರ, ನಾಗರೀಕತೆ

______________________________________________________________

______________________________________________________________

ನಿ – ನಿಧಿ, ನಿಜ, ನಿಮಿಷ, ನಿಮಿರು, ನಿನಗೆ

______________________________________________________________

______________________________________________________________

ನೀ – ನೀಚ, ನೀರು, ನೀನು, ನೀತಿ, ನೀರೆ, ನೀವು

______________________________________________________________

______________________________________________________________

ನು – ನುಂಗು, ನುಣುಪು, ನುಸುಳು

______________________________________________________________

______________________________________________________________

ನೂ – ನೂಕು, ನೂರು, ನೂಪುರ

______________________________________________________________

______________________________________________________________

ನೃ – ನೃಪ ನೆ – ನೆಪ, ನೆವರು, ನೆನೆದು, ನೆನೆಸು

______________________________________________________________

______________________________________________________________

ನೇ – ನೇಸರ, ನೇಕಾರ, ನೇರ, ನೇವರಿಸು

______________________________________________________________

______________________________________________________________

ನೈ – ನೈದಿಲೆ ನೊ – ನೊಣ, ನೊಸಲು, ನೊಬೆಲ್

______________________________________________________________

______________________________________________________________

ನೋ – ನೋಡು, ನೋಟ, ನೋವು ನೌ – ನೌಕೆ, ನೌಕರಿ

______________________________________________________________

______________________________________________________________

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ನಂ – ನಂಟು, ನಂಬಿಕೆ, ನಂತರ ನಃ –

______________________________________________________________

______________________________________________________________

ಗುಣಿತಾಕ್ಷರಗಳಿರುವ ಪದಗಳು [ ಪ ]

ಪ – ಪಟ, ಪಗಡೆ, ಪಟಾಕಿ, ಪಡಸಾಲೆ, ಪದ

______________________________________________________________

______________________________________________________________

ಪಾ – ಪಾಠ, ಪಾವು, ಪಾರಣೆ, ಪಾವನ, ಪಾರಿಜಾತ, ಪಾಠಶಾಲೆ

______________________________________________________________

______________________________________________________________

ಪಿ – ಪಿಕ, ಪಿನಾಕ, ಪಿಳಿಪಿಳಿ ಪೀ – ಪೀಪಿ, ಪೀತಾಂಬರ, ಪೀನ, ಪೀಠ

______________________________________________________________

______________________________________________________________

ಪು – ಪುಟ, ಪುರ ಪೂ – ಪೂಜ, ಪೂರಿ, ಪೂಜಾರಿ

______________________________________________________________

______________________________________________________________

ಪೃ – ಪೃಥ್ವಿ ಪೆ – ಪೆಡಸು, ವಪೆ

______________________________________________________________

______________________________________________________________

ಪೇ – ಪೇಟ, ಪೇದೆ, ಪೇರಲ, ಪೇಚಾಟ, ಪೇರಿಸು

______________________________________________________________

______________________________________________________________

ಪೈ – ಪೈಸೆ, ಪೈಗಂಬರ, ಪೈಪೋಟಿ ಪೊ – ಪೊದೆ, ಪೊಗರು, ಪೊರಕೆ

______________________________________________________________

______________________________________________________________

ಪೋ– ಪೋಲೀಸು, ಪೋಷಾಕು, ಪೋಷಕ

______________________________________________________________

______________________________________________________________

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಪೌ – ಪೌರಾಣಿಕ, ಪೌರನೀತಿ, ಪೌರುಷ

ಪಂ – ಪಂಡಿತ, ಪಂಚಮ, ಪಂಗನಾಮ ಪಃ –

ಗುಣಿತಾಕ್ಷರಗಳಿರುವ ಪದಗಳು [ ಫ ]

ಫ – ಫಲ, ಫಸಲು, ಫಕೀರ, ಫಲಕ, ಫಜೀತಿ

ಫಾ – ಫಾಲ, ಫಾತಿಮ, ಫಾದರ್ಫಿ ಫಿ – ಫಿರ್ಯಾದು, ಕಾಫಿ,

ಫೀ – ಫೀಜು ಫು – ಫೂ – ಫೃ –

ಫೆ – ಕೆಫೆ ಫೇ – ಫೇಲಾಗು ಫೈ – ಫೈಲು ಫೊ – ಫೋ–

ಫೌ – ಫೌಂಡೇಶನ್ ಫಂ – ಫಃ –

ಗುಣಿತಾಕ್ಷರಗಳಿರುವ ಪದಗಳು [ ಬ ]

ಬ – ಬನ, ಬರೆ, ಬಳೆ, ಬವಣೆ, ಬಸವ, ಬಡಗಿ

ಬಾ – ಬಾಳು, ಬಾಧೆ, ಬಾಗಿಲು, ಬಾಳೆಮರ, ಬಾಬ

ದಿನಾಂಕ : ____ / ____ / ____

ಚಟುವಟಿಕೆ 1:

ವಸ್ತುಗಳ ಹೆಸರುಗಳನ್ನು ವೃತ್ತ ಹಾಕಿ ಗುರುತಿಸಿ.

| | | | | |
|---|---|---|---|---|
| ದನ | ದಾವಣಿ | ದಂತ | ದೀವಾನ | ದಿನ |
| ದವಸ | ದುಃಖ | ದೀಪದ ಹಣತೆ | ದೇಗುಲ | ದಂಡ |
| ದುರ್ಬೀನು | ಬಂದೂಕ | ದಾನ | ದಾರಿ | ದವಡೆ |

ಚಟುವಟಿಕೆ 2:

ಸರಿಯಾದ ದ ಅಕ್ಷರದ ಗುಣಿತಾಕ್ಷರವನ್ನು ಬರೆದು ಅರ್ಥಪೂರ್ಣ ಪದ ರಚಿಸಿ.

ದ ದಾ ದಿ ದೀ ದು ದೂ ದೃ ದೆ

ದೇ ದೈ ದೊ ದೋ ದೌ ದಂ ದಃ

| | | | |
|---|---|---|---|
| ಕ ____ ಬ | ____ ತ | ____ ಡಾಯಿಸು | ____ ಪ |
| ____ ಸೆ | ____ ಣಿ | ____ ಚು | ____ ನ |
| ____ ಡ್ಡದು | ____ ರೆ | ____ ಗಲೆ | ____ ಡಿಮೆ |
| ____ ನಂದಿನ | ____ ಶ | ____ ಹ | ____ ರ್ಗ |
| ____ ವರು | ____ ಗುಲ | ಒ ____ | ____ ನ |
| ಎ ____ | ____ ಢ | ____ ರ | ____ ರಿ |

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಬಿ – ಬಿದಿರು, ಬಿಡಿಸು, ಬಿರಿ, ಬಿಸಿಲು, ಬಿಡಾರ, ಬಿಡು, ಬಿಸಿ, ಬಿಡಿ

ಬೀ – ಬೀಗ, ಬೀದಿ, ಬೀಸು, ಬೀಳಿಸು, ಬೀಡು, ಬೀರು

ಬು – ಬುನಾದಿ, ಬುಗುರಿ, ಬುಗುಡಿ, ಬುಲಾಕು

ಬೂ – ಬೂದಿ, ಬೂಚಿ, ಲಂಬೂ

ಬೃ – ಬೃದಾವನ, ಬೃಹದಾಕಾರ, ಬೃಹನ್ನಳೆ, ಬೃಹತ್

ಬೆ – ಬೆಣೆ, ಬೆನಕ, ಬೆರಗು, ಬೆರಸು, ಬೆಳಕು, ಬೆಸುಗೆ

ಬೇ – ಬೇಡ, ಬೇಕು, ಬೇಜಾರು, ಕುಬೇರ, ಬೇರು, ಬೇಟೆ, ಬೇವು

ಬೈ – ಬೈಗುಳ, ಬೈರಾಗಿ　　　ಬೊ – ಬೊಗಳು, ಬೊಗಸೆ, ಬೊಕಳೆ

ಬೋ– ಬೋಗಿ, ಬೋರೆ, ಬೋಗುಣಿ, ಬೋಳು　　　ಬೌ – ಬೌಬೌ

ಬಂ – ಬಂಕ, ಬಂಜರು, ಬಂದರು, ಬಂಧ, ಬಂಗಾರ　　　ಬಃ –

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗುಣಿತಾಕ್ಷರಗಳಿರುವ ಪದಗಳು [ ಭ ]

ಭ – ಭವನ, ಭರಣಿ, ಭರತ, ಸುಲಭ, ಕಂಭ, ಜಂಭ, ಕುಂಭ, ಭಯ, ಅಭಯ

ಭಾ – ಭಾವ, ಭಾಷಣ, ಭಾವನೆ, ಭಾವನ, ಭಾವುಕ, ಭಾವಪೂರ್ಣ, ಭಾರತ

ಭಿ – ಭಿಕಾರಿ, ಅಭಿ, ಭಿತ್ತಿ    ಭೀ – ಭೀತಿ, ಭೀಕರ, ಭೀಮ

ಭು – ಭುವಿ, ಭುವನ    ಭೂ – ಭೂಮಿ, ಭೂತಳ, ಭೂರಿಭೋಜನ, ಭೂಮಿಕ

ಭೃ – ಭೃಕುಟ, ಭೃಂಗ, ಭೃಗು    ಭೆ – ರಂಭೆ

ಭೇ – ಭೇಟಿ, ಭೇರಿ, ಭೇದಿಸು    ಭೈ – ಭೈರವ    ಭೊ – ಶಂಭೊ

ಭೋ– ಭೋಗ, ಭೋಜನ, ಭೊಜರಾಜ    ಭೌ – ಭೌತಿಕ, ಭೌಗೋಳಿಕ

ಭಂ – ಭಂಗ, ಭಂಡ    ಭಃ –

ಗುಣಿತಾಕ್ಷರಗಳಿರುವ ಪದಗಳು [ ಮ ]

ಮ – ಮನ, ಮಗ, ಮರಳು, ಮನೆ, ಮತ, ಮಗಳು

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಮಾ – ಮಾವ, ಮಾಸ, ಮಾನಸ, ಮಾನಸಿಕ, ಮಾನ, ಮಾವು, ಮಾತೆ

ಮಿ – ಮಿನುಗು, ಮಿಸುಕು, ಮಿಣುಕು, ಮಿಲನ, ಮಿಕ

ಮೀ – ಮೀನು, ಮೀಸೆ, ಮೀಯು, ಮೀರು

ಮು – ಮುದುಕ, ಮುರಾರಿ, ಮುಸುಕು, ಮುದ, ಮುರಿ

ಮೂ– ಮೂಟೆ, ಮೂಲೆ, ಮೂತಿ, ಮೂಸು, ಮೂಡು, ಮೂಡಣ

ಮೃ – ಮೃದು, ಮೃಗ, ಮೃದಂಗ, ಮೃಡ

ಮೆ – ಮೆದಳು, ಮೆಲುಕು, ಮೆರಗು

ಮೇ – ಮೇನಕೆ, ಮೇಲೆ, ಮೇಕೆ, ಮೇವು, ಮೇರೆ, ಮೇರು, ಮೇಟಿ

ಮೈ – ಮೈದಾನ, ಮೈಮರೆ, ಮೈದುನ, ಮೈಕೈ

ಮೊ – ಮೊಲ, ಮೊದಲು, ಮೊಸರು, ಮೊಗ

ದಿನಾಂಕ : ____ / ____ / ____

ಚಟುವಟಿಕೆ 1:
ಗುಂಪಿಗೆ ಸೇರದ ಪದಗಳನ್ನು ವೃತ್ತ ಹಾಕಿ ಗುರುತಿಸಿ:

| | | | |
|---|---|---|---|
| ವರ | ನರ | ದಾರ | ಸರ |
| ಕಲ | ನೆಲ | ಜಲ | ಫಲ |
| ಅರಸ | ಆಗಸ | ಸರಸ | ಅಗಸ |
| ಮಗ | ನಗ | ಲಾಗ | ಜಗ |

ಚಟುವಟಿಕೆ 2: ಈ ಕೆಳಗಿನ ವಾಕ್ಯಗಳನ್ನು ಓದಿ:

ಭವ್ಯ ಭಾರತದ ಭವಿಷ್ಯ

ಭುವನಸುಂದರಿ ಪ್ರತಿಭಾ

ಭದ್ರತಾ ಪಡೆಯ ಹುದ್ದೆ ಭರ್ತಿ

ವಿಭೂತಿ ಹಚ್ಚಿದ ಭಾಷಣಕಾರ

ಭೂಗೋಳದ ಮೇಲೆ ಭಾರತದ ನಕ್ಷೆ

ಮನೆಯ ಮೇಲೆ ಮಿಂಚುಳ್ಳಿ

ಮಿಂಚಿನಂತೆ ಮಾಯವಾದ ಮಲೆನಾಡಿನ ಕಾಡು

ಮಲೈ ಮಹದೇಶ್ವರನ ಮಹಿಮೆ

ಮೂಲೆಯಲ್ಲಿ ಮಲಗಿದ ಮನೆಯೊಡೆಯ

ಬಾನಿನಲ್ಲಿ ಬೆಳ್ಳಕ್ಕಿಗಳ ಬಳಗ

ಬರುವ ದಾರಿ ಬೇರೆ ಬೇರೆ

ಬೇಲಿಯ ಬದಿಯ ಬೇವಿನ ಮರ

| | | | |
|---|---|---|---|
| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಮೋ– ಮೋಡ, ಮೋಸ, ಮೋದಕ ಮೌ – ಮೌನ, ಮೌಳಿ, ಮೌಖಿಕ

ಮಂ– ಮಂಗ, ಮಂಗಳ, ಮಂಟಪ, ಮಂದಿರ, ಮಂದಾರ ಮಃ –

ಗುಣಿತಾಕ್ಷರಗಳಿರುವ ಪದಗಳು [ ಯ ]

ಯ – ಯಮ, ಯತಿ, ಯಶ, ಯಜಮಾನ, ಯವನ, ಯಕ್ಷ

ಯಾ– ಯಾತನೆ, ಯಾಚನೆ, ಯಾರು, ಯಾಗ

ಯಿ – ಆಯಿ, ಕಾಯಿ, ತಾಯಿ, ಬಾಯಿ, ಕಡಾಯಿ, ಬಡಾಯಿ

ಯೀ– ಯು– ಯುಗ, ಯುಗಾದಿ, ಯುವಕ, ಯುವತಿ

ಯೂ– ಪೀಯೂಷ, ಮಯೂರ, ಸರಯೂ

ಯೃ – ಯೆ – ಮಾಯೆ, ಛಾಯೆ ಯೇ– ಯೇಸು,

ಯೈ – ಯೊ– ಯೋ– ಯೋಗ, ಯೋಜನೆ, ಪಯೋಜ

ಯೌ– ಯೌವನ ಯಂ– ಸಾಯಂಕಾಲ ಯಃ –

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗುಣಿತಾಕ್ಷರಗಳಿರುವ ಪದಗಳು [ ರ ]

ರ – ರಸ, ರಜ, ರಗಳೆ, ರಭಸ, ರಸಿಕ, ರಣರಂಗ

________________________________________

________________________________________

ರಾ – ರಾಣಿ, ರಾಜ, ರಾಧ, ರಾವಣ, ರಾಜಕೀಯ

________________________________________

________________________________________

ರಿ – ರಿಪು, ರಿಂಗು, ರಿಪೀಸು, ರಿವಾಜು

________________________________________

________________________________________

ರೀ – ರೀತಿ,  ಖರೀದಿ, ವಿಪರೀತ, ಪರೀಕ್ಷೆ, ತಾರೀಖು

________________________________________

________________________________________

ರು – ರುಪಾಯಿ, ರುಮಾಲು, ರುಜುವಾತು

________________________________________

________________________________________

ರೂ – ರೂಪ, ರೂಢಿ, ಅಪರೂಪ        ರೃ –

________________________________________

________________________________________

ರೆ – ಕೆರೆ, ಹೊರೆ, ಅರೆ, ಮರೆ, ತೆರೆ, ನೆರೆ, ಸೆರೆ, ಎರೆ

________________________________________

________________________________________

ರೇ – ರೇಖ, ರೇಣುಕ, ರೇಗಿಸು, ರೇಖೆ, ರೇಷಿಮೆ

________________________________________

________________________________________

ರೈ – ರೈತ, ರೈಲು        ರೊ – ಅದರೊಳಗೆ

________________________________________

________________________________________

ರೋ– ರೋಗಿ, ರೋಗಾಣು, ರೋದನ        ರೌ – ರೌಡಿ, ರೌದ್ರ

________________________________________

________________________________________

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ರಂ – ರಂಗು, ರಂಪ, ರಂಗೋಲಿ, ರಂಭಾಪುರಿ ರಃ –

______________________________________________

______________________________________________

ಗುಣಿತಾಕ್ಷರಗಳಿರುವ ಪದಗಳು [ ಲ ]

ಲ – ಲವಂಗ, ಲಲನೆ, ಲವಣ, ಲಸಿಕೆ, ಪಾಲನೆ

______________________________________________

______________________________________________

ಲಾ – ಲಾಲಿ, ಲಾಡಿ, ಲಾವಂಚ, ಲಾವಣಿ, ಲಾಲನೆ

______________________________________________

______________________________________________

ಲಿ – ಲಿಪಿ, ಲಿಂಗ, ಲಿಖಿತ, ಇಲಿ, ಕಲಿಕೆ, ಖಾಲಿ, ಮಾಲಿ

______________________________________________

______________________________________________

ಲೀ – ಲೀಲೆ, ಲೀಲಾಜಾಲ, ಸಲೀಸು, ತಾಲೀಮು, ಮಾಲೀಷು

______________________________________________

______________________________________________

ಲು – ಜುಲುಮೆ, ಕುಲುಮೆ, ಒಲುಮೆ, ಹಾಲು, ಸೋಲು

______________________________________________

______________________________________________

ಲೂ – ಉಲೂಚಿ, ಲೂಟಿ ಲೃ – ಲೆ – ಕಡಲೆ, ಎಲೆ, ತರಲೆ

______________________________________________

______________________________________________

ಲೇ – ಲೇಸು, ಲೇವಡಿ, ಲೇಖಕ, ಲೇಖನಿ ಲೈ – ಲೈಲಾ ಲೊ –

______________________________________________

______________________________________________

ಲೋ– ಲೋಟ, ಲೋಕ, ಲೋಪ, ಲೋಹ, ಲೋಚನ

______________________________________________

______________________________________________

ಲೌ – ಲೌಕಿಕ ಲಂ – ಲಂಗ, ಲಂಚ, ಲಂಕೆ, ಲಂಬ ಲಃ –

______________________________________________

______________________________________________

ದಿನಾಂಕ : ____ / ____ / ____

ಚಟುವಟಿಕೆ 1:
ಯಾರು ಯಾವಾಗ ಯಾವ - ಇವುಗಳನ್ನು ಸರಿಯಾದ ಸ್ಥಳದಲ್ಲಿ ಬಳಸಿ:

- ಹರ್ಷ ಹೂವು ಕಿತ್ತನು. __________ ಹೂವು ಕಿತ್ತರು ?
- ರವಿ ಮುಂಜಾನೆ ಅಂಗಡಿಗೆ ಹೋದನು. ರವಿ __________ ಅಂಗಡಿಗೆ ಹೋದನು ?
- ಭೂಮಿಕಾ ಮಾವಿನ ಹಣ್ಣು ತಿಂದಳು. ಭೂಮಿಕಾ __________ ಹಣ್ಣು ತಿಂದಳು ?

ಚಟುವಟಿಕೆ 2: ಕೆಳಗಿನ ಪದಗಳನ್ನು ಮೂರು ಗುಂಪುಗಳಾಗಿ ಮಾಡಿ:

ಮರದ ಕೊರಡು ಮೋದಕ ಮಂಗಳ ಮಂಟಪ
ಮಂದಿರ ಯಮ ಯತಿ ಕಾಯಿ ತಾಯಿ ಕಡಾಯಿ
ಯುವತಿ ರಣರಂಗ ರಾಜ ರಾವಣ ರಿಪೀಸು
ರೂಪಾಯಿ ರುಮಾಲು ಕೆರೆ ರೈತ ರೈಲು ರೋಗಿ
ಲವಣ ಹಾಲು ಎಲೆ ಕಡಲೆ ಲೋಟ
ಲೋಹ ಲಂಗ ರಾಜಭವನ ಆಲಯ ರಂಗಸ್ಥಳ

| ವ್ಯಕ್ತಿಯ ಹೆಸರು | ಜಾಗದ ಹೆಸರು | ವಸ್ತುವಿನ ಹೆಸರು |
|---|---|---|
| | | |

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಗುಣಿತಾಕ್ಷರಗಳಿರುವ ಪದಗಳು [ ವ ]

ವ – ವರ, ವನ, ವಚನ, ವಕೀಲ

ವಾ – ವಾಸ, ವಾದ, ವಾರ,  ವಾನರ, ವಾಹನ

ವಿ – ವಿನಯ, ವಿಶೇಷ, ವಿನೋದ, ವಿಹಾರ, ಸಾವಿರ

ವೀ – ವೀಣೆ, ವೀರ        ವು – ಹಸಿವು, ಮಾವು, ಬೇವು, ಹೂವು

ವೂ – ನಾವೂ, ನೀವೂ, ಎಲ್ಲವೂ

ವೃ – ವೃಂದ, ವೃಷಭ        ವೆ – ಸೇತುವೆ, ರವೆ, ಸವೆ, ಕಡವೆ

ವೇ – ವೇಣು, ವೇಗ, ವೇದ        ವೈ – ವೈದೇಹಿ, ವೈನಾಡು, ವೈಶಾಖ, ವೈದಿಕ

ವೊ –    ವೋ– ನವೋದಯ    ವೌ –    ವಂ – ವಂಚನೆ    ವಃ –

ಗುಣಿತಾಕ್ಷರಗಳಿರುವ ಪದಗಳು [ ಶ ]

ಶ – ಶಶಿ, ಶಕ, ಶರ, ಶರಣ        ಶಾ – ಶಾಲೆ, ಶಾರದೆ, ಶಾಖಾಹಾರ

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಶಿ – ಶಿರ, ಶಿವ, ಶಿಖೆ, ಶಿರಡಿ    ಶೀ – ಶೀತ, ಶೀಲ

ಶು – ಶುಕ, ಶುನಕ, ಶುಚಿ    ಶೂ – ಶೂರ, ಶೂಲ

ಶೃ – ಶೃತಿ, ಶೃಂಗ, ಸುಶೃತ, ಅಶೃಧಾರೆ    ಶೆ – ಶೆಕೆ, ಆಶೆ, ನಿಶೆ, ನಶೆ, ನಿರಾಶೆ

ಶೇ – ಶೇಖರ, ಶೇಂಗಾ, ಶೇಷ    ಶೈ – ಶೈಲ    ಶೊ –

ಶೋ– ಶೋಭ, ಶೋಷಣೆ, ಕಿಶೋರ    ಶೌ – ಶೌಚಾಲಯ, ಶೌರಿ

ಶಂ – ಶಂಖ, ಶಂಭು, ಶಂಕರ, ಶಂಕೆ, ಪ್ರಶಂಸೆ    ಶಃ –

ಗುಣಿತಾಕ್ಷರಗಳಿರುವ ಪದಗಳು [ ಷ ]

ಷ – ಷರ, ಮೇಷ, ವೃಷಭ, ಸಶೇಷ    ಷಾ – ತುಷಾರ, ಹೇಷಾರವ, ಉಷಾ

ಷಿ – ಮಹಿಷಿ, ಋಷಿ    ಷೀ –    ಷು –    ಷೂ –    ಷೃ –

ಷೆ –    ಷೇ –    ಷೈ –    ಷೊ –    ಷೋ–    ಷೌ –    ಷಂ –

ಷಃ – ಬಹುಷಃ

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

## ಗುಣಿತಾಕ್ಷರಗಳಿರುವ ಪದಗಳು [ ಸ ]

ಸ – ಸರ, ಸರಸ, ಸದರ, ಸಮಯ

ಸಾ – ಸಾರು, ಸಾಗರ, ಸಾಧನೆ, ಸಾರಿಕ, ಸಾಲು

ಸಿ – ಸಿರಿತನ, ಸಿಂಘಳೀಕ, ಸಿಹಿಯೂಟ, ಸಿನಿಮಾ

ಸೀ – ಸೀತಾ, ಸೀಸ, ಸೀರು, ಸೀರೆ, ಸೀಟಿ, ಸೀಳು, ಸೀಮೆ

ಸು – ಸುಗುಣ, ಸುಲಭ, ಸುಮಧುರ ಸುಲಲಿತ, ಸುಡು

ಸೂ – ಸೂತ, ಸೂತಕ, ಕಸೂತಿ, ವಸೂಲಿ, ಮಸೂರ

ಸೃ – ಸೃಜನ     ಸೆ – ಸೆರೆ, ಸೆರಗು, ಸೆಳೆತ, ಸೆಖೆ, ಹಸೆ, ದೋಸೆ, ಮೀಸೆ

ಸೇ – ಸೇಬು, ಸೇತುವೆ, ಸೇವನೆ, ಸೇರು     ಸೈ – ಸೈನಿಕ, ಸೈರಣೆ, ಸೈರನ್

ಸೊ – ಸೊಗಸು, ಸೊಬಗು, ಸೊಗದೆ ಬೇರು, ಸೊರಗು, ಸೊರಬ

ಸೋ– ಸೋಮವಾರ, ಸೋಮಾರಿ, ಸೋಗಲಾಡಿ, ಸೋರು, ಸೋಲು, ಸೋಜಿಗ

ದಿನಾಂಕ : ____ / ____ / ____

ಚಟುವಟಿಕೆ 1: ಸಜೀವ ನಿರ್ಜೀವ ವಸ್ತುಗಳ ಎರಡು ಗುಂಪು ಮಾಡಿ:

ವಾನರ ವಾಹನ ವೀಣೆ ಮಾವಿನ ಮರ
ವೃಷಭ ರವೆ ಸೇತುವೆ ಕಡವೆ ವೇಣು ಶಶಿ
ಶರ ಶುಕ ಶುನಕ ಶೂಲ ಶೇಂಗಾ ಶಂಖ
ಸರ ಸೀಸ ಸೀರೆ ಸಿಂಹ ಮೀನು

| ಸಜೀವಿ | ನಿರ್ಜೀವ ವಸ್ತು |
| --- | --- |
| | |

ಚಟುವಟಿಕೆ 2: ಆವರಣದಲ್ಲಿ ಕೊಟ್ಟಿರುವ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ:

1. ಶಶಾಂಕನು ಶಾಲೆಗೆ ____________________
(ಹೋಗುವಳು, ಹೋಗುವನು, ಹೋಗುವುದು)

2. ಅವಿನಾಶ್ ಬೆಂಚಿನ ಮೇಲೆ ________________
(ಕುಳಿತಳು, ಕುಳಿತಿತು, ಕುಳಿತನು)

3. ರಾಗಿಣಿ ರಂಗೋಲಿ ____________________
(ಬಿಡಿಸಿದಳು, ಬಿಡಿಸಿದನು, ಬಿಡಿಸಿತು)

4. ಗಿಡುಗ ಆಕಾಶದಲ್ಲಿ ____________________
(ಹಾರಿದನು, ಹಾರಿದಳು, ಹಾರಿತು)

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
| --- | --- | --- | --- |

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಸೌ – ಸೌಟು, ಸೌರಭ, ಸೌದೆ, ಸೌಧ, ಸೌರವ್ಯೂಹ

ಸಂ – ಸಂಧಿ, ಸಂದಿ, ಸಂಬಂಧ, ಸಂಕಟ, ಸಂಕೇತ, ಸಂಚಾರ ಸಃ –

ಗುಣಿತಾಕ್ಷರಗಳಿರುವ ಪದಗಳು [ ಹ ]

ಹ – ಹಣ, ಹಸು, ಹವನ, ಹಗಲು, ಹರಟೆ

ಹಾ – ಹಾಲು, ಹಾದಿ, ಹಾಡು, ಹಾಕು, ಹಾಗಾಗಿ

ಹಿ – ಹಿಡಿ, ಹಿಮ, ಹಿಡಂಬಿ, ಕಹಿ, ಸಿಹಿ, ಸಹಿಸು

ಹೀ – ಹೀಗೆ, ಹೀನ, ಹೀರೆಕಾಯಿ, ಹೀರು, ಹೀಚು

ಹು – ಹುಳ, ಹುಡುಗ, ಹುಡುಗಿ, ಹುಡುಕು, ಹುಡಿ

ಹೂ – ಹೂವು, ಹೂಜಿ, ಹೂಮಾಲೆ, ಹೂತುಹಾಕು, ಹೂಡು

ಹೃ – ಹೃದಯ ಹೆ – ಹೆದೆ, ಹೆಸರು, ಹೆದರಿಕೆ, ಹೆಗಲು, ಮಾಹೆ

ಹೇ – ಹೇಮ, ಹೇಗೆ, ಹೇಷಾರವ, ಮಹೇಶ, ಹೇಳಿಕೆ

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಹೈ – ಹೈದ, ಹೈನುಗಾರಿಕೆ, ಹೈದರಾಲಿ, ಹೈರಾಣ

ಹೊ – ಹೊದಿಕೆ, ಹೊದರು, ಹೊಗಳಿಕೆ, ಹೊಸತನ, ಹೊಲಿಗೆ, ಹೊರೆ

ಹೋ– ಹೋರೆ, ಹೋರಾಟ, ಹೋಗು, ಹೋಲಿಕೆ ಹೌ – ಹೌದು

ಹಂ – ಹಂದರ, ಹಂದಿ, ಹಂಗಾಮಿ, ಅಹಂಕಾರ, ಹಂತ ಹಃ –

ಗುಣಿತಾಕ್ಷರಗಳಿರುವ ಪದಗಳು [ ಳ ]

ಳ – ಆಳ, ಗಾಳ, ಲಾಳ, ದಾಳ, ಗೆಳತಿ ಳಾ – ಇಳಾ, ಕೊಳಾಯಿ

ಳಿ – ಸುಳಿ, ಈಳಿಗೆ, ಸವಕಳಿ, ಕಳಕಳಿ, ಇಳಿ, ಬಳಿ ಳೀ – ಅವಳೀಗ

ಳು – ಅಳು, ಬೀಳು, ಏಳು, ಕೇಳು, ಆಳು, ಹೋಳು, ತಾಳು, ಗೋಳು

ಳೂ – ಅವಳೂ, ಇವಳೂ, ಮಂಗಳೂರು, ಬೆಂಗಳೂರು ಳೃ –

ಳೆ – ಇಳೆ, ಮಳೆ, ಕೊಳೆ, ಗೆಳೆಯ, ಹಳೆಯ, ಬಳೆ, ಕಳೆ

ಳೇ – ಅವಳೇನು, ಕೇಳೇ ಗೆಳತಿ ಳೈ – ಮೇಳೈಸಿ ಳೊ – ಕೊರಳೊಳು

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಳೋ – ಕೇಳೋಣ ಳೌ – ಳಂ – ಕಳಂಕ ಳಃ –

ಒತ್ತಕ್ಷರದ ಪದಗಳು:

ಕ್ಕ – ಅಕ್ಕ, ಚಿಕ್ಕ, ಅಕ್ಕಿ, ತತ್ಕಾಲ, ವಲ್ಕಲ, ಅಂಬೇಡ್ಕರ್

ಖ್ಖ – ಉತ್ಖನನ, ಲೆಖ್ಖ

ಗ್ಗ – ಅಗ್ಗ, ಹಗ್ಗ, ಹುಗ್ಗಿ, ಗದ್ಗದ, ಹಾಲ್ಗಡಲು, ಸುಗ್ಗಿ, ನುಗ್ಗು, ಬಗ್ಗು

ಘ್ಘ – ಉದ್ಘಾಟನೆ, ಅಫ್ಘಾನ್

ಚ್ಚ – ಅಚ್ಚರಿ, ಬೆಚ್ಚದಿರು, ಚುಚ್ಚು, ನಿಶ್ಚಲ, ಮಚ್ಚು, ಕೆಚ್ಚಲು

ಛ್ಛ – ವಿಚ್ಛೇದನ, ಆಚ್ಛಾದಿತ, ಪ್ರಚ್ಛನ್ನ

ಜ್ಜ – ಅಜ್ಜ, ಸಜ್ಜಿಗೆ, ಮಜ್ಜಿಗೆ, ಗಜ್ಜುಗ, ಗಜ್ಜರಿ, ಸಜ್ಜು, ಸಜ್ಜನ

ಝ್ಝ – ವಾಗ್ಝರಿ

ದಿನಾಂಕ : _____ / _____ / _____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಟ್ಟ — ಅಟ್ಟಣಿಗೆ, ಅಟ್ಟಹಾಸ, ಕಂಡಕ್ಟರ್, ಹಿಸ್ಟರಿ, ಕಷ್ಟ, ಬಟ್ಟಲು, ಬಟ್ಟೆ

ಠ್ಠ — ಬಲಿಷ್ಠ, ಕೋಷ್ಠ, ಕುಷ್ಠ

ಡ್ಡ — ಅಡ್ಡ, ಕಡ್ಡಿ, ಗುಡ್ಡ, ಗಿಡ್ಡ, ಖೆಡ್ಡ, ಗಡ್ಡ

ಢ್ಢ — ಅಸಢ್ಢಾಳ

ಣ್ಣ — ಅಣ್ಣ, ಬೆಣ್ಣೆ, ಕಣ್ಣು, ಕೃಷ್ಣ, ಉಣ್ಣು, ಮಣ್ಣು, ಹೆಣ್ಣು, ಹಣ್ಣು

ತ್ತ — ಅತ್ತ, ಇತ್ತ, ಪಂಕ್ತಿ, ಸಮಾಪ್ತಿ, ಭಕ್ತಿ, ಭತ್ತ, ತತ್ತಿ, ಹತ್ತಿ, ಮೆತ್ತಗೆ, ಕತ್ತರಿ

ಥ್ಥ — ಆಸ್ಥಾನ, ಸ್ಥಳ, ಕಪಿತ್ಥ, ಸ್ಥೂಲ, ಪುತ್ಥಳಿ

ದ್ದ — ಪೆದ್ದ, ಮದ್ದಾನೆ, ಶಬ್ದ, ಗೊದ್ದ, ಬಿದ್ದಿದ್ದಾನೆ, ಮುದ್ದು, ಗದ್ದ, ಸದ್ದು, ಇದ್ದಿಲು

ಧ್ಧ — ಆಪದ್ಧನ, ಉದ್ಧಟತನ, ಉಧ್ಧಾರ, ಮುಗ್ಧ

ನ್ನ — ಅನ್ನ, ಯತ್ನ, ರನ್ನ, ರತ್ನ, ಕನ್ನ, ಮನ್ನಿಸು, ಕುನ್ನಿ

| | | | |
|---|---|---|---|
| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಪ್ಪ – ಅಪ್ಪ, ಅಲ್ಪ, ಕಲ್ಪ, ಉತ್ಪಾದನೆ, ತುಪ್ಪ, ತೆಪ್ಪ, ಕಪ್ಪು, ಶಿಲ್ಪ, ಸತ್ಪಾತ್ರ

______________________________________________

______________________________________________

ಫ್ಫ – ಡಾಲ್ಫಿನ್, ಸತ್ಫಲ

______________________________________________

______________________________________________

ಬ್ಬ – ಅಬ್ಬ, ಕಬ್ಬು, ಅಕ್ಬರ್, ಉಬ್ಬು, ಹಬ್ಬು, ಕಬ್ಬು

______________________________________________

______________________________________________

ಭ್ಭ – ಉದ್ಭವ, ಸದ್ಭಾವನೆ, ಅದ್ಭುತ

______________________________________________

______________________________________________

ಮ್ಮ – ಅಮ್ಮ, ತಮ್ಮ, ಆತ್ಮ, ಮಹಾತ್ಮ, ಒಮ್ಮತ, ಸನ್ಮಾನ, ಕಿಮ್ಮತ್ತು, ಹಿಮ್ಮಡಿ

______________________________________________

______________________________________________

ಯ್ಯ – ಅಯ್ಯ ಕ್ಯಾತೆ, ತ್ಯಾಗ, ಉದ್ಯಾನವನ, ನ್ಯಾಯ, ಗಣ್ಯ, ರಮ್ಯ, ವ್ಯತ್ಯಾಸ

______________________________________________

______________________________________________

ರ್ರ – ವಕ್ರ, ಚಕ್ರ, ಚಿತ್ರ, ಪ್ರಕಾಶ, ವ್ರತ, ಗ್ರಹಣ, ಖಾತ್ರಿ, ಮಿಶ್ರ, ಪ್ರಶಂಸೆ

______________________________________________

______________________________________________

ಲ್ಲ – ಅಲ್ಲ, ಬೆಲ್ಲ, ಇಡ್ಲಿ, ಅಹ್ಲಾದ, ಪೆಟ್ಲು, ಕ್ಲೀಷೆ, ಮಲ್ಲ, ವಿಶ್ಲೇಷಣೆ

______________________________________________

______________________________________________

ವ್ವ – ಅವ್ವ, ಕವ್ವಾಲಿ, ಬಿಲ್ವ, ಸ್ವಭಾವ, ಅಶ್ವ, ವಿಶ್ವಾಸ, ವಿಶ್ವ, ನಿಶ್ವಾಸ

______________________________________________

______________________________________________

ಶ್ಯ – ನಿಶ್ಯೇಷ

______________________________________________

______________________________________________

ದಿನಾಂಕ : ____ / ____ / ____

ಎರಡು ಬಾರಿ ಓದಿರಿ, ಒಂದು ಬಾರಿ ಬರೆಯಿರಿ:

ಷ್ಷ – ಪಕ್ಷಿ, ಅಕ್ಷಯ, ಕ್ಷಾಮ, ಕಾಲಕ್ಷೇಪ, ಕ್ಷಮೆ, ಹಸ್ತಕ್ಷೇಪ

ಸ್ಸ – ಉತ್ಸಾಹ, ದುಸ್ಸಾಹಸ, ತತ್ಸಮ, ಸಂವತ್ಸರ, ವತ್ಸ, ಕುತ್ಸಿತ

ಹ್ಹ – ಕಲ್ಹತ್ತಿ, ಕೊಲ್ಹಾಪುರ

ಳ್ಳ – ಹಳ್ಳಿ , ಕಳ್ಳ, ಬಳ್ಳ, ಕಳ್ಳಿ, ಬಳ್ಳಿ, ಸುಳ್ಳು, ಎಳ್ಳು

ರ್ – ವರ್ಗ, ಸರ್ಗ, ಅರ್ಕ, ದರ್ಭೆ, ವಿದರ್ಭ, ಆರ್ತ, ಅರ್ಥ, ವರ್ತಕ, ವರ್ಷ

ೃ – ಶೃತಿ, ಕೃತಿ, ಶೃಂಗಾರ, ಕೃಷ್ಣ, ವೃಥಾ, ವೃದ್ಧ, ಅಭಿವೃದ್ಧಿ, ವೃಕ್ಷ, ಕೃತ್ರಿಮ

ಃ – ಅಂತಃಪುರ, ಬಹುಷಃ, ದುಃಖ

ಙ – ವಾಙ್ಮಯ

ಞ – ಯಜ್ಞ, ವಿಜ್ಞಾನ, ಸರ್ವಜ್ಞ, ಕೃತಜ್ಞ, ಅಭಿಜ್ಞಾನ, ತಜ್ಞ, ಜಿಜ್ಞಾಸೆ

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
'ಕ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಮಕ್ಕಳ ದಿನ:**

ರುಕ್ಕು ಇಂದು ಮಕ್ಕಳ ದಿನ. ಮನೆ ಚೊಕ್ಕಟ ಮಾಡು.
ಚಿಕ್ಕ ಅಕ್ಕಿ ಹಸೆ ಹಾಕು. ಅಕ್ಕ ಪಕ್ಕದ ಮನೆಯ ಮಕ್ಕಳು ಬರಲಿ.
ಹೋಗಿ ಕರೆ. ಹಿರಿಯರಿಗೆ ನಮಸ್ಕರಿಸು.
ಅಗೋ ಅಕ್ಕ ಮಕ್ಕಳು ಬಂದರು. ಅಡಿಗೆ ಮನೆಯಲ್ಲಿ ಚಕ್ಕುಲಿ,
ಉಂಡೆ ಇದೆ. ಬೆಕ್ಕು ಬಂದೀತು ಜೋಕೆ. ಚಿಕ್ಕ ಮಕ್ಕಳಿಗೆ ಸಕ್ಕರೆ,
ಚಕ್ಕುಲಿ ಹಂಚು. ಹಿರಿಯರಿಗೆ ಪಾನಕ ಕೊಡು.
ಮಕ್ಕಳು ನಕ್ಕು ನಲಿಯುವುದು ನೋಡಲು ಚೆಂದ!

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.

'ಗ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಸುಗ್ಗಿಯ ಕಾಲ:**

ಈಗ ಸುಗ್ಗಿಯ ಕಾಲ ರೈತರಿಗೆ ಹಿಗ್ಗೋಹಿಗ್ಗು.
ನೋಡು ಸುಗ್ಗಿಯ ಕುಣಿತ. ಜನರ ನುಗ್ಗೋನುಗ್ಗು.
ಜಗ್ಗು ನುಗ್ಗಿದ ಅವನ ಮುಖ ಕುಗ್ಗಿತ್ತು.
ರಾಧೆ ಸುಗ್ಗಿಯ ಕುಣಿತ ನೋಡಲು ಹೋಗಲಾರಳು.
ಮನೆಯೊಳಗೆ ನಿಂತು ಹುಗ್ಗಿ ಮಾಡುವಳು.
ಜಗ್ಗು ಬರಲೆಂದು ಕಾಯುವಳು.
ಅಂತೂ ಸುಗ್ಗಿ ದಿನಗಳೆ ಸುದಿನಗಳು.

ದಿನಾಂಕ : ____ / ____ / ____

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
‘ಚ’ - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

## ನಚ್ಚಿಯ ದೋಣಿ:

ನಚ್ಚಿ ತಂದೆಗೆ ಅಚ್ಚು ಮೆಚ್ಚಿನ ಮಗ. ಚಿಕ್ಕವನಾಗಿದ್ದಾಗ ರಚ್ಚೆ ಹಿಡಿದನಂತೆ.
ಈಗ ಜಾಣ. ಆತ ಒಂದು ಪಚ್ಚೆ ದೋಣಿ ಮಾಡಿದ. ನೀರಿನ ಮೇಲೆ ತೇಲಿಸಿದ.
ದೋಣಿ ನೀರಿನಲ್ಲಿ ಕೊಚ್ಚಿಕೊಂಡು ಹೋಯಿತು. ನಚ್ಚಿ ಬೆಚ್ಚಿದ ಪಾಪ ಪೆಚ್ಚಾದ.
ಆದರೂ ನೆಚ್ಚಿನ ಗೆಳೆಯರೊಂದಿಗೆ ಸೇರಿಕೊಂಡು ಹೆಚ್ಚು ಹೆಚ್ಚು ದೋಣಿ ಮಾಡಿ
ನೀರಿನ ಮೇಲೆ ತೇಲಿಸಿದ.
ನಚ್ಚಿಯ ತಂದೆ ಹೆಚ್ಚು ಹಣ ವೆಚ್ಚಮಾಡಿ ನಚ್ಚಿಯನ್ನು ಓದಿಸಿದರು.
ನಚ್ಚಿಗೆ ಮೆಚ್ಚಾದ ಕೆಲಸ ಸಿಕ್ಕಿತು.
ಈಗ ಆತನಿಗೆ ಚಿಕ್ಕ ದೋಣಿ ಬದಲು ಹಿರಿಯ ಹಡಗು ಮಾಡುವ ಕೆಲಸ.
ನಚ್ಚಿ ನಿಶ್ಚಿಂತೆಯಿಂದ ಜೀವನ ನಡೆಸುವನು.

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
‘ಜ’ - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

## ಅಜ್ಜಿ ಅಜ್ಜ:

ಸಜ್ಜಕ್ಕ, ಅಜ್ಜ ಅಜ್ಜಿ ಅಜ್ಜಂಪುರದಿಂದ ಬರುವರು. ಊಟಕ್ಕೆ ಸಜ್ಜುಗೊಳಿಸೋಣ.
ಗೊಜ್ಜು ಕಜ್ಜಾಯ ಮಾಡೋಣ. ತಿಂಡಿಗೆ ಸಜ್ಜಿಗೆ ಮಾಡೋಣ.
ಆದರೆ ಮಜ್ಜಿಗೆ ಬೇಡ ಮೊಸರಿರಲಿ. ಅಜ್ಜ ಅಜ್ಜಿ ಬಂದರು.
ನನಗೆ ಗಜ್ಜುಗ ಬಳೆ ನಿನಗೆ ಗೆಜ್ಜೆ ಡಾಬು ತಂದಿರುವರು.
ಇಜ್ಜೊತೆ ಬಳೆಗಳೂ ಸುಂದರವಾಗಿವೆ. ಅಜ್ಜಿ, ಒಂದು ದಿನ ಗೆಜ್ಜೆ ಡಾಬು ಹಾಕಿಕೋ.
ಹೆಜ್ಜೆ ಹೆಜ್ಜೆಗೂ ನಲಿಯಬೇಡ. ಈಗ ಗಜ್ಜುಗ ಕೊಡು.
ನೋಡು ಗಜ್ಜುಗ ಉಜ್ಜೀ ಉಜ್ಜೀ ತೇದು ಹೋಗಿದೆ. ಬಾ ಆಡೋಣ.

| | | | |
|---|---|---|---|
| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |

ದಿನಾಂಕ : ____ / ____ / ____

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
'ಟ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಕಿಟ್ಟು ಮತ್ತು ಹುಲಿ:**

ಕಿಟ್ಟು ಅಟ್ಟದ ಮೇಲೆ ಹೋದ. ಬಟ್ಟೆಯ ಪೆಟ್ಟಿಗೆ ತೆಗೆದ.
ಒಂದು ಪಂಚೆ ತೆಗೆದು ದಟ್ಟಿ ಉಟ್ಟುಕೊಂಡ.
ಕಿಟ್ಟು, ರೊಟ್ಟಿ, ಕಟ್ಟಿಕೊಂಡು ಪಟ್ಟಣದ ಬಳಿಯ ಬೆಟ್ಟಕ್ಕೆ ಹೋದ.
ಪಟ್ಟೆಪಟ್ಟೆ ಹುಲಿ ಹಿಡಿದಿಟ್ಟ. ಬೋನು ತಟ್ಟಿದ. ಹುಲಿ ಗಟ್ಟಿಯಾಗಿ ಅರಚಿತು.
ಪುಟ್ಟೇಗೌಡ ನೋಡಿದ. ಕಿಟ್ಟು ರಟ್ಟೆ ಹಿಡಿದು ಏಟು ಕೊಟ್ಟ.
ಕಿಟ್ಟು ಅಳುಮೋರೆ ಹಾಕಿಕೊಂಡು ನೆಟ್ಟಗೆ ಹೊರಟ.
ಮರದ ಬಳಿ ನಿಂತ ಪುಟಾಣಿ ಕಿಟ್ಟನ ಕುಚೇಷ್ಟೆ ನೋಡಿದ.
ಹೊಟ್ಟೆ ನೋವಾಗುವರೆಗೂ ನಕ್ಕ.

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
'ಣ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಕೃಷ್ಣನ ಪಟ:**

ಕೃಷ್ಣನ ಪಟ ನೋಡು. ಬಣ್ಣ ಬಣ್ಣದ ಬಟ್ಟೆ ಧರಿಸಿರುವನು. ಕೈಲಿ ಕೊಳಲು.
ಕಣ್ಣಿಗೆ ಕಾಡಿಗೆ. ಕೃಷ್ಣನ ಬಳಿ ನಿಂತಿರುವ ಹೆಣ್ಣು ನೋಡು. ತಟ್ಟೆಯ ತುಂಬಾ ಹಣ್ಣು.
ಸಣ್ಣ ಬಟ್ಟಲು ತುಂಬ ಬೆಣ್ಣೆ ತಂದಿರುವಳು.
ಕೃಷ್ಣ ಉಣ್ಣದೆ ಹೆಣ್ಣಿನ ಕಣ್ಣು ಮುಚ್ಚಿ ಕಾಡಿಸುವನು.
ಅಕ್ಕನ ಮಗ ಕೃಷ್ಣನೂ ತುಂಟನೇ. ಒಂದು ಸಲ ಈತ ಮಣ್ಣು ತಿಂದ.
ಅವನ ಅಣ್ಣ ಬಲರಾಮ ಅಕ್ಕನಿಗೆ ದೂರು ಹೇಳಿದ. ಅಕ್ಕ ದೊಣ್ಣೆ ತಂದಳು.
ಕೃಷ್ಣ ಬಾಯಿ ತೆರೆದ. ಮಣ್ಣು ಉಣ್ಣಬಾರದೆಂದು ಅಕ್ಕ ಹೇಳಿದಳು.
ತಣ್ಣೀರಿನಿಂದ ಅವನ ಬಾಯಿ ತೊಳೆದಳು.

ದಿನಾಂಕ : ____ / ____ / ____

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
'ನ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಪಟ್ಟಣಕ್ಕೆ ಬಂದ ಚಿನ್ನ:**

ಮೊನ್ನೆ, ಚಿನ್ನ ನಾನು ಚನ್ನಪಟ್ಟಣಕ್ಕೆ ರತ್ನಳ ಮನೆಗೆ ಹೋಗಿದ್ದೆವು.
ನನ್ನ ಸ್ನೇಹಿತರನ್ನೂ ನೋಡಿ ಬಂದೆವು. ನಿನ್ನೆ ನದಿ ಸ್ನಾನ ಚೆನ್ನಾಗಿತ್ತು.
ನದಿ ಬಳಿ ಕಲಸನ್ನ ತಿನ್ನುವಾಗ ತಮಾಷೆಯಾಯಿತು.
ರತ್ನ ನದಿ ನೋಡುತ್ತಾ ದೊನ್ನೆಯಲ್ಲಿ ಅನ್ನ ತಿನ್ನುತಿದ್ದಳು.
ಸನ್ನೆ ಮಾಡುವುದಕ್ಕೆ ಮೊದಲೇ ಒಂದು ಕುನ್ನಿ ರತ್ನಳ ಬೆನ್ನ ಹಿಂದೆ ಬೊಗಳಿತು.
ದೊನ್ನೆ ಕೆಳಗೆ ಬಿತ್ತು. ಕುನ್ನಿ ಅದನ್ನು ಎತ್ತಿಕೊಂಡು ಓಡಿತು.
ಆಗಲೇ ರತ್ನಳ ಬೆನ್ನಿನ ಮೇಲೆ ಒಂದು ಮಾವಿನ ಹಣ್ಣು ಬಿತ್ತು.
ನೋವನ್ನು ತಡೆದು ರತ್ನ ನಗುತ್ತಾ ಹಣ್ಣನ್ನು ಕಚ್ಚಿದಳು.
ನಿನ್ನನ್ನೂ ಕರೆದಿದ್ದರೆ ಚೆನ್ನಾಗಿತ್ತು.

ಈ ಕೆಳಗಿನ ಕಥೆಯನ್ನು ಎರಡು ಬಾರಿ ಓದಿ.
'ಬ' - ದ ಒತ್ತಕ್ಷರವಿರುವ ಪದಗಳನ್ನು ಗೆರೆ ಹಾಕಿ ಗುರುತಿಸಿ:

**ಗುಬ್ಬಿಯ ಹಬ್ಬ:**

ಗುಬ್ಬಿಯಲ್ಲಿ ಹಬ್ಬ ನಡೆಯಿತು.
ದೇವಾಲಯಕ್ಕೆ ಮನೆಯಿಂದ ಡಬ್ಬಿಯೊಳಗೆ ಕೊಬ್ಬರಿ ಸಕ್ಕರೆ ಮತ್ತು ಒಬ್ಬಟ್ಟು
ತೆಗೆದುಕೊಂಡು ಹೋಗುತ್ತಾ ಇದ್ದೆ. ಹೆಬ್ಬಾಗಿಲಿಗೆ ಬಂದೆ.
ಅಬ್ಬಬ್ಬಾ, ಜಾಜಿ ಹಬ್ಬಿದ ಮರದ ಬಳಿ ಹೆಬ್ಬಾವು ಗೊಬ್ಬರದ ಹತ್ತಿರ ಹೋಗುತ್ತಿದ್ದ
ಕುರಿಯನ್ನು ಹಿಡಿದಿತ್ತು. ನೋಡಿ ನನಗೆ ತಬ್ಬಿಬ್ಬಾಯಿತು.
ಕಣ್ಣು ಮಬ್ಬಿನಿಂದ ಕಾಣದಾಯಿತು. ಬಿದ್ದೆ ಹೆಬ್ಬೆರಳಿಗೆ ಏಟು ಬಿತ್ತು.
ಅಷ್ಟರಲ್ಲಿ ಸುಬ್ಬು ಮತ್ತಿಬ್ಬರು ಬಂದು ಹೆಬ್ಬಾವನ್ನು ಹೊಡೆದರು.

ದಿನಾಂಕ : ____ / ____ / ____

ಈ ಕಥೆಯನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸಿ:

**ರಜೆಯ ದಿನ:**

ಇಂದು ಭಾನುವಾರ. ಪಾಠ ಶಾಲೆಗಳಿಗೆ ರಜಾ. ನಾವು ಆಟ ಆಡೋಣ. ನಾಳೆ ಸೋಮವಾರ. ಪಾಠಶಾಲೆ ಇದೆ. ಆಡಲು ಸಮಯ ಸಾಲದು. ಮಂಗಳವಾರ, ಬುಧವಾರ, ಗುರುವಾರ, ಅದರ ಮಾರನೆಯ ದಿನ ಶುಕ್ರವಾರ, ಆಮೇಲೆ ಶನಿವಾರವೂ ಶಾಲೆ ಇದೆ. ಆಗ ಓದಬೇಕು. ಶಾಲೆಯ ಕೆಲಸ ಮಾಡಬೇಕು. ಆದುದ್ದರಿಂದ ಇಂದೇ ಆಡೋಣ ಬಾ. ನಾವೇ ಆಡುವುದು ಬೇಡ, ಗೆಳೆಯರೂ ಜೊತೆಗೂಡಿದರೆ ಸೊಗಸು.

ಒಂದು ವಾರದಲ್ಲಿ ಎಷ್ಟು ದಿನಗಳಿವೆ? __________

ವಾರದ ದಿನಗಳನ್ನು ಕ್ರಮವಾಗಿ ಬರೆಯಿರಿ:

| | |
|---|---|
| ಧ ರ ವಾ ಬು | 1 ಭಾನುವಾರ |
| ರು ಗು ವಾ ರ | 2 ______ |
| ಗ ಮಂ ಳ ರ ವಾ | 3 ______ |
| ನು ರ ವಾ ಭಾ | 4 ______ |
| ನಿ ಶ ರ ವಾ | 5 ______ |
| ಕ್ರ ವಾ ರ ಶು | 6 ______ |
| ಮ ವಾ ಸೋ ರ | 7 ______ |

ಬಿಟ್ಟ ಸ್ಥಳ ತುಂಬಿರಿ:

ಭಾನುವಾರದ ಮುಂದಿನ ದಿನ ______

ಬುಧವಾರದ ಹಿಂದಿನ ದಿನ ______

ಗುರುವಾರದ ಮುಂದಿನ ದಿನ ______

ಶನಿವಾರದ ಮುಂದಿನ ದಿನ ______

ನನ್ನ ಶಾಲೆಯ ರಜದ ದಿನ ______

ದಿನಾಂಕ : ____ / ____ / ____

ಈ ಕೆಳಗಿನ ಕಥೆಯು ಗೋಜಲಾಗಿದೆ.
ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆಯಿರಿ.

**ರೈತ:**

| | |
|---|---|
| 4. ಮಳೆಯು ಬರಲು ಕಾಯುವನು. | 1. |
| 2. ಬೆಳೆಯಲು ಹದವ ಮಾಡಿಹನು. | 2. |
| 6. ಚಿಗುರುತ ಪೈರು ಬೆಳೆದಿಹವು. | 3. |
| 1. ರೈತನು ಭೂಮಿಯ ಉಳುತಿಹನು. | 4. |
| 5. ಸಾಗುತ ದಿನಗಳು ಉರುಳಿದವು. | 5. |
| 3. ಪೈರನು ನಾಟಿಯ ಮಾಡುವನು. | 6. |
| 11. ಚೀಲಕ್ಕೆ ರಾಗಿಯ ಹಾಕಿದನು | 7. |
| 8. ಬಲಿತ ತೆನೆಗಳು ಬಾಗಿದವು. | 8. |
| 12. ಅಂಗಡಿಗೆ ರಾಗಿಯ ಮಾರಿದನು. | 9. |
| 10. ರೈತನು ರಾಗಿಯ ತೂರಿದನು. | 10. |
| 7. ತೆನೆಗಳು ಬಳುಕುತ ನಲಿದಿಹವು. | 11. |
| 9. ತೆನೆಯನು ಕಣವ ಮಾಡಿದನು. | 12. |
| 13. ಹರುಷದಿ ಹಣವನು ಎಣಿಸಿದನು. | 13. |

| ಪೋಷಕರ / ಶಿಕ್ಷಕರ ಹಿಮ್ಮಾಹಿತಿ : | ☺ 😐 ☹ | ಪೋಷಕರ / ಶಿಕ್ಷಕರ ಸಹಿ : | |
|---|---|---|---|

Sikshana FOUNDATION
Love of learning

+91 80 26629890
info@sikshana.org
www.sikshana.org
# 41, K. R. Road, Basavangudi
Bengaluru – 560004, Karnataka